ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ 2025 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 08
ಪುಟ/Pages : 12
ಬೆಲೆ/Price : ₹ 15/–

**Akhila Karnataka Shikshaka Samachar | May 2025 | Monthly**









A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಆತ್ಮೀಯರೇ,

ಆದಿಶಂಕರಾಚಾರ್ಯರು, ಜೀವಿಸಿದ್ದು, ಕೇವಲ 32 ವರ್ಷಗಳ ಕಾಲ, ಆದರೆ ಸಾಧಿಸಿದ್ದು ಅಪರಿಮಿತ. ಈ ಅಲ್ಪಕಾಲಾವಧಿಯಲ್ಲಿಯೇ ದೇಶದಾದ್ಯಂತ ಸಂಚರಿಸಿ ಹಿಂದು ಧರ್ಮವನ್ನು ಪುನರುಜ್ಜೀವನ ಗೊಳಿಸಿದ ಅದ್ವೈತ ಸಿದ್ಧಾಂತದ ಪ್ರತಿಪಾದಕರು. ದೇಶದ ನಾಲ್ಕು ದಿಕ್ಕುಗಳಲ್ಲೂ ಧರ್ಮವನ್ನು ಸಾರುವ ಪೀಠಗಳನ್ನು ಸ್ಥಾಪಿಸಿದ ಮಹಾತ್ಮರು. ಎಲ್ಲ ದುಃಖಗಳಿಗೆ ಅಜ್ಞಾನವೇ ಮೂಲ ಮತ್ತು ಜ್ಞಾನವನ್ನು ಹುಡುಕುವ ಮೂಲಕ ಮಾತ್ರ ಮನುಷ್ಯರು ನಿಜವಾದ ಸಂತೋಷವನ್ನು ಕಂಡುಕೊಳ್ಳಬಹುದು ಎಂಬುದು ಅವರ ಅಪಾರ ನಂಬಿಕೆಯಾಗಿತ್ತು. ಇಂದಿಗೂ ಶಂಕರರ ಬೋಧನೆಗಳು ಜನಮಾನಸದಲ್ಲಿ ಪ್ರಚಲಿತವಾಗಿವೆ.

ವಿದ್ಯಾರ್ಥಿಗಳು ರಜೆಯ ಮಜವನ್ನು ಅನುಭವಿಸುತ್ತಿರಬಹುದು. ಆಟೋಟಗಳ ಜೊತೆ ಜೊತೆಯಲ್ಲಿ ಮನೆಯ ಹಿರಿಯರೊಂದಿಗೆ ಸಂವಾದ, ಪರಸ್ಪರ ಪ್ರೀತಿ, ಗೌರವಗಳನ್ನು ಬೆಳೆಸಿಕೊಳ್ಳುವುದು ಮುಖ್ಯ. ಮನೆಯಲ್ಲಿ ತಂದೆ ತಾಯಿ, ಹಿರಿಯರು ಕೂಡ ತಮ್ಮ ಬಾಲ್ಯ, ಜೀವನದ ಮೌಲ್ಯಗಳು, ದೇಶಭಕ್ತರ ಯಶೋಗಾಥೆಗಳು, ಸಂಪ್ರದಾಯ ಹಾಗೂ ಸಂಸ್ಕಾರಗಳನ್ನು ಕಥೆಯ ರೂಪದಲ್ಲಿ ಹೇಳುವುದರ ಮೂಲಕ ಮಕ್ಕಳ ಮನಃಪರಿವರ್ತನೆ ಮಾಡುವುದು ಕೂಡ ಜವಾಬ್ದಾರಿಯಾಗಿದೆ.

ಸಿ.ಇ.ಟಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿರುವುದು ಅಕ್ಷಮ್ಯ ಅಪರಾಧ. ಇದು ಯಾವ ಮಾರ್ಗಸೂಚಿಯಲ್ಲಿದೆ? ಇಂದು ಜನಿವಾರ ನಾಳೆ ಶಿವದಾರ ಇದು ಹಿಂದುಗಳ ಮೇಲಿನ ದೌರ್ಜನ್ಯ. ಇದನ್ನು ಮಾಧ್ಯಮಿಕ ಶಿಕ್ಷಕ ಸಂಘವು ಖಂಡಿಸುತ್ತದೆ. ಇದಕ್ಕೆ ಕಾರಣರಾದ ಸಿಬ್ಬಂದಿಯನ್ನು ತತಕ್ಷಣ ವಜಾ ಮಾಡಬೇಕು ಹಾಗೂ ಸಂತ್ರಸ್ತರಾದ ವಿದ್ಯಾರ್ಥಿಗಳಿಗೆ ನ್ಯಾಯವನ್ನು ಒದಗಿಸುವುದು ಸರ್ಕಾರ ಕರ್ತವ್ಯವಾಗಿರುತ್ತದೆ.

ರಾಷ್ಟ್ರ ಮತ್ತು ಪ್ರಜೆಗಳ ಬೆಳವಣಿಗೆಗೆ ಶಿಕ್ಷಣವು ನಿರ್ಣಾಯಕವಾದುದು. ಶಿಕ್ಷಣದಲ್ಲಿ ಪುರುಷ-ಸ್ತ್ರೀ ಎಂಬ ತಾರತಮ್ಯ ಇಲ್ಲ. ವಿದ್ಯೆಯನ್ನು ಪಡೆದ ಪ್ರತಿಯೊಬ್ಬರು ತಮ್ಮ ಜ್ಞಾನವನ್ನು ಮುಂದಿನ ಪೀಳಿಗೆಗೆ ಧಾರೆಯೆರೆಯ ಬೇಕಾಗಿರುವುದು ಅವರ ಕರ್ತವ್ಯವಾಗಿರುತ್ತದೆ.

ನಮ್ಮ ಶಾಲಾ ಶಿಕ್ಷಣವನ್ನು ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಎಂದು ವಿವಿಧ ಹಂತಗಳನ್ನಾಗಿ ವಿಂಗಡಿಸಲಾಗಿದೆ. ಈ ತಿಂಗಳ ಕೊನೆಯ ಭಾಗದಲ್ಲಿ 2025-26ರ ಶೈಕ್ಷಣಿಕ ವರ್ಷವು ಪ್ರಾರಂಭವಾಗಲಿದೆ. ಕಳೆದ ವರ್ಷದಲ್ಲಿ ಸಾಧಿಸಿದ ಪ್ರಗತಿಗಿಂತ ಈ ವರ್ಷ ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಬೇಕಾಗಿದೆ ಎಂಬುದನ್ನು ವಿದ್ಯಾರ್ಥಿಗಳು ಮನಗಂಡು ಪ್ರಾರಂಭಿಕ ಹಂತದಿಂದಲೇ ಸೇತುಬಂಧ, ಮರುಸಿಂಚನ ಹೀಗೆ ಶಿಕ್ಷಣ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ನಿಮ್ಮ ಗುರಿಯನ್ನು ಸಾಧಿಸಬಹುದು. ಇದಕ್ಕೆ ಪೂರಕವಾಗಿ ಶಿಕ್ಷಕರು, ಪೋಷಕರು ತಮ್ಮ ಕರ್ತವ್ಯಗಳನ್ನು ನಿಭಾಯಿಸಿದರೆ ಮಗುವಿನ ಸರ್ವಾಂಗೀಣ ಬೆಳವಣಿಗೆ ಸಾಧ್ಯವಾಗುವುದು.

ಈ ದಿಶೆಯಲ್ಲಿ ವಿದ್ಯಾರ್ಥಿಗಳು ಪ್ರಸ್ತುತ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೇ ನೀವು ಯಶಸ್ಸನ್ನು ಸಾಧಿಸುವಂತಾಗಲಿ ಇದಕ್ಕೆ ಪೂರಕವಾಗಿ ಶಿಕ್ಷಕರು ಮತ್ತು ಪೋಷಕರು ಸಹಕರಿಸುವಿರಿ ಎಂಬ ಆಶಾಭಾವನೆಯಿಂದ ಮಾಧ್ಯಮಿಕ ಶಿಕ್ಷಕ ಸಂಘವು ಶುಭವನ್ನು ಹಾರೈಸುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

**ಗೌರವ ಸಂಪಾದಕರು**
ಹೆಚ್. ನಾಗಭೂಷಣರಾವ್

**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು**
ಜೆ. ಎಮ್. ಜೋಶಿ

**ವ್ಯವಸ್ಥಾಪಕ ಸಂಪಾದಕರು**
ಸಂದೀಪ ಬೂದಿಹಾಳ

**ಗೌರವ ಸಲಹೆಗಾರರು**
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

**ಸಂಪಾದಕ ಮಂಡಳಿ**
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

**ವಿನ್ಯಾಸಕಾರರು**
ಪ್ರೇರಣಾ

**ಕಛೇರಿ ವ್ಯವಸ್ಥಾಪಕರು**
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಕೌಟುಂಬಿಕ ಮೌಲ್ಯಗಳು
  – ಡಾ॥ ಲೋಕೇಶ್ ಟಿ. ಎನ್. 3
- ಮರುಸಿಂಚನ
  – ಚಿದಾನಂದ ಆ ಕೇಸ್ಕರ ಪಾಟೀಲ 5
- ಪೂರ್ವಸೂರಿಗಳೊಡನೆ ಅಂಕಣ
  – ನಂ. ನಾಗಲಕ್ಷ್ಮಿ 6
- ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಬಾಹ್ಯಾಕಾಶದ ತಾರೆ ಸುನೀತಾ ವಿಲಿಯಮ್ಸ್
  – ಲಕ್ಷ್ಮೀಸಿಂಗ್ ಬಿ. 8
- ಶ್ರೀಶಂಕರಭಗವತ್ಪಾದರು
  – ನಂ. ನಾಗಲಕ್ಷ್ಮಿ 11
- ಚಿತ್ರಸುದ್ದಿ 12

# ಶ್ರೀಶಂಕರಭಗವತ್ಪಾದರು



ಭರತಖಂಡದಲ್ಲಿ ಧಾರ್ಮಿಕ ಗೊಂದಲ, ಆಧ್ಯಾತ್ಮಿಕ ವಿಚಾರದಲ್ಲಿನ ಪರಸ್ಪರ ವಿರೋಧಾಭಿಪ್ರಾಯಗಳು, ರಾಜಕೀಯವಾಗಿ ಅನಾಯಕತ್ವ ಮುಂತಾದುವು ತಲೆದೋರಿ, ಇಡೀ ದೇಶವು ಅತಂತ್ರ ಸ್ಥಿತಿಯಲ್ಲಿದ್ದಾಗ ಭಗವತ್ಪಾದರಾದ ಶ್ರೀಶಂಕರಾಚಾರ್ಯರು ಅವತರಿಸಿದರು. ಶೈವ, ವೈಷ್ಣವ, ಶಾಕ್ತ, ಕಾಪಾಲಿಕ ಇತ್ಯಾದಿ ವಿಭಿನ್ನ ಮತಗಳಲ್ಲಿದ್ದ ಲೋಪದೋಷಗಳನ್ನು ತೊಲಗಿಸಿ, ಅವುಗಳನ್ನೆಲ್ಲಾ ವೈದಿಕ ಮತದ ಆಶ್ರಯಕ್ಕೆ ತಂದು, ಷಣ್ಮತ ಸ್ಥಾಪನಾಚಾರ್ಯರೆಂಬ ಹೆಸರು ಪಡೆದರು. ಅವರು ಜೀವಿಸಿದ್ದ ಮೂವತ್ತೆರಡೇ ವರ್ಷಗಳಲ್ಲಿ ದೇಶದಾದ್ಯಂತ ಪರಿವ್ರಾಜಕರಾಗಿ ಪ್ರತಿಕೂಲ ಹವಾಮಾನಗಳ ಪ್ರದೇಶಗಳಲ್ಲೆಲ್ಲಾ ಕಾಲ್ನಡಿಗೆಯಲ್ಲಿಯೇ ಪ್ರಯಾಣ ಮಾಡುತ್ತ, ಜನರಲ್ಲಿ ಧರ್ಮಜಾಗೃತಿಯನ್ನು ಮೂಡಿಸಿ, ವೇದ ವೇದಾಂತಗಳ ಪರಮಾರ್ಥವು 'ಅದ್ವೈತತತ್ವ' ಎಂಬುದನ್ನು ಸ್ಪಷ್ಟಗೊಳಿಸಿದರು. ದೇಶದ ನಾಲ್ಕೂ ದಿಕ್ಕುಗಳಲ್ಲಿ ಆಮ್ನಾಯ ಪೀಠಗಳನ್ನು ಸ್ಥಾಪಿಸಿ, ಭಾರತವು ಧಾರ್ಮಿಕವಾಗಿ ಒಂದು 'ರಾಷ್ಟ್ರ'ವೆಂಬುದನ್ನು ದೃಢಪಡಿಸಿದರು. ನಾಲ್ಕೂ ಪೀಠಗಳಿಗೆ ಅಧ್ಯಕ್ಷರನ್ನಾಗಿ ಬೇರೆ ಬೇರೆ ಪ್ರಾಂತ್ಯಗಳ ವಿದ್ವಾಂಸರನ್ನು ನೇಮಿಸಿ, ಭಾವೈಕ್ಯವನ್ನು ಮೂಡಿಸಿದರು. ಕರ್ನಾಟಕದ ಶೃಂಗೇರಿಯಲ್ಲಿ (ಶೃಂಗಗಿರಿ) ದಕ್ಷಿಣಾಮ್ನಾಯ ಶ್ರೀಶಾರದಾಪೀಠವೆಂಬ ಹೆಸರಿನಿಂದ ಮೊದಲ ಪೀಠವನ್ನು ಸ್ಥಾಪಿಸಿ ಶಿಷ್ಯರಾದ ಶ್ರೀಸುರೇಶ್ವರಾಚಾರ್ಯರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದರು. ಜಗನ್ನಾಥಸ್ವಾಮಿಯ ಕ್ಷೇತ್ರವಾದ ಪುರಿಯಲ್ಲಿ ಪೂರ್ವಾಮ್ನಾಯ ಪೀಠವೆಂದು ಸ್ಥಾಪಿಸಿ ತಮ್ಮ ಪ್ರಿಯ ಶಿಷ್ಯರಾದ ಹಸ್ತಾಮಲಕಾಚಾರ್ಯರನ್ನು ಅದರ ಅಧ್ಯಕ್ಷರನ್ನಾಗಿ ನಿಯಮಿಸಿದರು. ನಂತರದಲ್ಲಿ ದ್ವಾರಕಾ ಕ್ಷೇತ್ರದಲ್ಲಿ ಪಶ್ಚಿಮಾಮ್ನಾಯ ಪೀಠವನ್ನು ಸ್ಥಾಪಿಸಿ ಅದಕ್ಕೆ ತಮ್ಮ ಪ್ರಥಮ ಶಿಷ್ಯರಾದ ಸನಂದನಾಚಾರ್ಯರನ್ನು ಅಧ್ಯಕ್ಷ ಪೀಠದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದರು. ನಾಲ್ಕನೆಯದಾಗಿ ಉತ್ತರದ ಬದರೀ ಕ್ಷೇತ್ರವನ್ನು ಉತ್ತರಾಮ್ನಾಯ ಪೀಠವೆಂದು ಹೆಸರಿಸಿ ಅದಕ್ಕೆ ಶೃಂಗಗಿರಿಯ ತೋಟಕಾಚಾರ್ಯರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು.

ಉತ್ತರದ ಕಾಶ್ಮೀರದಿಂದ ದಕ್ಷಿಣದ ರಾಮೇಶ್ವರದವರೆಗೂ ಇರುವುದು ಒಂದೇ ಧರ್ಮವೆಂದೂ, ಜನರ ಉಡುಗೆ, ತೊಡುಗೆ, ಭಾಷೆಗಳು, ಬಣ್ಣಗಳು ಆಯಾ ಸೀಮೆಯ ವಾತಾವರಣವೇ ಮೊದಲಾದ ಭೌಗೋಳಿಕ ಪರಿಸ್ಥಿತಿಗನುಗುಣವಾಗಿ ವ್ಯತ್ಯಾಸವಿರುವುದೆಂಬುದನ್ನು ಶಂಕರರು ಸ್ಪಷ್ಟಪಡಿಸಿದರು. ಎಲ್ಲರೂ ಮೂಲತಃ ವೇದಾಂತ ಧರ್ಮಕ್ಕೆ ಸೇರಿದವರೆಂದು ನಿರೂಪಿಸುತ್ತ, ಆಭಾವೈಕ್ಯವನ್ನು ಸಾಧಿಸಲು ಕೇರಳೀಯರಾದ ಆಚಾರ್ಯರನ್ನು, ಕರ್ನಾಟಕದ ಶೃಂಗಗಿರಿಯ ಶಾರದಾ ಪೀಠಕ್ಕೆ ಮಾಹಿಷ್ಮತಿಯ ಸುರೇಶ್ವರರನ್ನು, ಪೂರ್ವತೀರದ ಶ್ರೀಗೋವರ್ಧನ ಪೀಠಕ್ಕೆ ಹಸ್ತಾಮಲಕರನ್ನೂ, ಪಶ್ಚಿಮದ ಶ್ರೀಕಾಳಿಕಾ ಪೀಠಕ್ಕೆ ದ್ರಾವಿಡ ದೇಶದ ಸನಂದನಾಚಾರ್ಯರನ್ನೂ, ಉತ್ತರದ ಬದರೀ ಪೀಠಕ್ಕೆ ಶೃಂಗಗಿರಿಯ ತೋಟಕರನ್ನೂ ಅಧ್ಯಕ್ಷರನ್ನಾಗಿ ನೇಮಿಸಿ ಭಾವೈಕ್ಯಕ್ಕೆ ಬುನಾದಿಯನ್ನು ಹಾಕಿಕೊಟ್ಟರು. ಇಡೀ ಭರತ ಖಂಡಕ್ಕೆ ಒಂದು ಸಂಪರ್ಕ ಭಾಷೆಯಿರಬೇಕೆಂದು ಸಂಸ್ಕೃತದಲ್ಲಿಯೇ ತಮ್ಮ ಗ್ರಂಥಗಳನ್ನೆಲ್ಲಾ ರಚಿಸಿದ್ದಲ್ಲದೆ, ತಮ್ಮ ಶಿಷ್ಯರು ಅವುಗಳನ್ನು ಇಡೀ ದೇಶದಲ್ಲಿ ಪ್ರಸಾರ ಮಾಡುವಂತೆ ಸೂಚಿಸಿದರು.

ಜಗದ್ಗುರು ಶ್ರೀಶಂಕರಾಚಾರ್ಯರ ಜೀವನ, ಅವರ ಸಾಧನೆ ಎಲ್ಲವೂ ಅದ್ಭುತ. ಕೇವಲ ಮೂವತ್ತೆರಡೇ ವರ್ಷಗಳು ಬದುಕಿದ್ದ ಅವರ ಜನನ, ಬಾಲ್ಯ, ಯೌವನ ಎಲ್ಲ ಹಂತಗಳಲ್ಲಿಯೂ ಅವರು ತೋರಿದ ಮಾರ್ಗದರ್ಶನ ಅನುಪಮವಾದುದು.

ಕೇರಳದ ಕಾಲಟಿ ಎಂಬ ಗ್ರಾಮದಲ್ಲಿ ಗುರುಕುಲವನ್ನು ನಡೆಸುತ್ತ, ಇಡೀ ಊರಿನವರೆಲ್ಲರ ಪ್ರೀತಿ, ಗೌರವಗಳಿಗೆ ಪಾತ್ರರಾಗಿದ್ದವರು ಆಚಾರ್ಯ ಶಿವಗುರು ಮತು ಅವರ ಧರ್ಮಪತ್ನಿ ಆರ್ಯಾಂಬ. ವಿವಾಹವಾದ ಇಪ್ಪತ್ತು ವರ್ಷಗಳ ನಂತರ ಗುರು ಆತ್ರೇಯರ ಮಾರ್ಗದರ್ಶನದಂತೆ ವಡಕುನಾಥಸ್ವಾಮಿಯ ಸೇವೆಯನ್ನು ಮಾಡಿ ದೈವಾನುಗ್ರಹವನ್ನು ಪಡೆದುಕೊಂಡರು ಆ ಸಾಧ್ವೀ ದಂಪತಿಗಳು. ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿಯ ದಿನ ಶುಭ ಪುನರ್ವಸು ನಕ್ಷತ್ರದಲ್ಲಿ, ವೃಷಭ ಲಗ್ನದಲ್ಲಿ ತಾಯಿ ಆರ್ಯಾಂಬ ಪುತ್ರರತ್ನನಿಗೆ ಜನ್ಮವಿತ್ತರು. ಅಪೂರ್ವವಾದ ದೈವೀಕಳೆಯೊಂದಿಗೆ ಜನಿಸಿದ ಮಗುವು ತನ್ನ ಸೌಂದರ್ಯ ಮತ್ತು ದಿವ್ಯ ತೇಜಸ್ಸಿನಿಂದ ಊರಿನವರೆಲ್ಲರ ಕಣ್ಮನಗಳನ್ನು ಸೆಳೆದಿತ್ತು. ಶಂಕರ ಎಂಬ ಹೆಸರಿನಿಂದ ಮುದ್ದು ಮಗುವಾಗಿ, ತಾಯಿ, ತಂದೆಗೆ ಮಾತ್ರವಲ್ಲದೆ ಎಲ್ಲರ ಕಣ್ಮಣಿಯಾಗಿ ಬೆಳೆದಿತ್ತು.

ಕೇವಲ ನಾಲ್ಕನೇ ವಯಸ್ಸಿನಿಂದಲೇ ತನ್ನ ಜನ್ಮಜಾತವಾದ ಪ್ರತಿಭೆ, ಜ್ಞಾನಸಂಪತ್ತಿನಿಂದ ಎಲ್ಲರ ಪ್ರೀತಿ, ವಿಶ್ವಾಸಗಳನ್ನು ಗಳಿಸಿದ್ದಲ್ಲದೆ, ತಾಯಿದೂರದ ನದಿಯಿಂದ ಬರುವಾಗ ಆಯಾಸದಿಂದ ಬಿದ್ದುಬಿಟ್ಟರೆಂದು ತಿಳಿದು, ಗಂಗಾಸ್ತೋತ್ರವನ್ನು ಪಠಿಸುತ್ತಾ, ಪೂರ್ಣಾನದಿಯು ತನ್ನಪಾತ್ರವನ್ನೇ ಬದಲಿಸಿ ತಮ್ಮ ಮನೆಯ ಬಾಗಿಲಿನಲ್ಲಿಯೇ ಹರಿಯುವಂತೆ ಮಾಡಿದ ಪವಾಡವೂ ಜನರಲ್ಲಿ ಅಚ್ಚರಿಯುಂಟುಮಾಡಿತ್ತು. ಬಾಲಕ ತನ್ನ ಆಧ್ಯಾತ್ಮಿಕ ತೃಷೆಯನ್ನು ಗುರುಕುಲಕ್ಕೆ ಬರುತ್ತಿದ್ದ ಋಷಿ, ಮುನಿಗಳಿಂದ, ವಿದ್ವಾಂಸರಿಂದ ಪರಿಹರಿಸಿಕೊಳ್ಳಲು ಯತ್ನಿಸುತ್ತಿದ್ದುದು ಜನರ ಅಭಿಮಾನವನ್ನು ಮತ್ತೂ ಹೆಚ್ಚಿಸುತ್ತಿತ್ತು.

ಬಾಲಶಂಕರ ಸಂನ್ಯಾಸವನ್ನು ಸ್ವೀಕರಿಸಿ ಜ್ಞಾನಾರ್ಜನೆಗಾಗಿ ಗುರುವಿನ ಅನ್ವೇಷಣೆ ಮಾಡಲು ಹೊರಟಿದ್ದೇ ಕಾಲ್ನಡಿಗೆಯಲ್ಲಿ. ಪರಿವ್ರಾಜಕರಾಗಿ ಗುರುಕುಲದ ಮೂವರು ಹಿರಿಯ ವಿದ್ಯಾರ್ಥಿಗಳೊಂದಿಗೆ ಹೊರಟವರು ಹಲವಾರು ಪ್ರದೇಶಗಳ ಪಟ್ಟಣ, ಅರಣ್ಯ, ಗಿರಿ, ನದಿಗಳನ್ನು ಕ್ರಮಿಸಿದ್ದರು. ದಾರಿಯುದ್ದಕ್ಕೂ ಭೇಟಿಮಾಡಿದ ಪಂಡಿತರು, ವಿದ್ವಾಂಸರು ಈ ಬಾಲಯತಿಯ ಮೇಧಾಶಕ್ತಿಯನ್ನು ಕಂಡು ಬೆರಗಾಗಿ, ಬಾಲ ದಕ್ಷಿಣಾಮೂರ್ತಿಯೆಂದೇ ಭಾವಿಸುತ್ತಿದ್ದರು. ಹಲವಾರು ರಾಜ್ಯಗಳ ಗಡಿಗಳನ್ನು ದಾಟಿ, ನರ್ಮದಾ ತೀರದಲ್ಲಿನ ಆಶ್ರಮದಲ್ಲಿ ಗುರುಕುಲ ನಡೆಸುತ್ತಿದ್ದ ಗೋವಿಂದಭಗವತ್ಪಾದರಲ್ಲಿ ಶಿಷ್ಯರಾದರು. ಗುರುವಿನ ಆಶೀರ್ವಾದ ಪಡೆದ ಬಾಲಯತಿಯ ಹೃದಯದಿಂದ ಹತ್ತು ಶ್ಲೋಕಗಳು ಒಂದರ ನಂತರ ಒಂದರಂತೆ ನಿರರ್ಗಳವಾಗಿ ಹೊರಬಂದಾಗ ಗುರುಗಳು ವಿಸ್ಮಿತರಾಗಿದ್ದರು. ಎಲ್ಲ ಕಡೆಯೂ ಬ್ರಹ್ಮನನ್ನೇ ಕಾಣುತ್ತ, 'ಸರ್ವಂಖಲ್ವಿದಂಬ್ರಹ್ಮಂ' ಎಂದ ಬಾಲಕನನ್ನು ಎಲ್ಲರೂ 'ಬಾಲಯತಿ' ಎಂದೇ ಕರೆಯತೊಡಗಿದ್ದರು.

ಸದಾಕಾಲ ಅಧ್ಯಯನದಲ್ಲಿ ತೊಡಗಿದ್ದು, ಗುರುವಿನ ಆದೇಶದಂತೆ ಹಲವಾರು ಕ್ಷೇತ್ರಗಳನ್ನು ಸಂದರ್ಶಿಸುತ್ತಾ, ಅಲ್ಲಿನ ವಿದ್ವಾಂಸರೊಂದಿಗೆ ಶಾಸ್ತ್ರಾರ್ಥಗಳನ್ನು ನಡೆಸುತ್ತಾ, ತಮ್ಮ ಜ್ಞಾನಧಾರೆಯಿಂದ ಎಲ್ಲರನ್ನು ತಣಿಸುತ್ತಾ ಅದ್ವೈತ ಧರ್ಮದ ಮಹತ್ತ್ವವನ್ನು ಎಲ್ಲೆಡೆ ಸಾರಿದರು. ಬದರಿಕಾಶ್ರಮದಲ್ಲಿ ನೆಲೆಸಿ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯುವುದೇ ಆದಿಯಾಗಿ ಉಪನಿಷತ್ತುಗಳೆಲ್ಲಕ್ಕೂ ಭಾಷ್ಯಗಳು, ಭಗವದ್ಗೀತಾಭಾಷ್ಯ ಎಲ್ಲವನ್ನೂ ಬರೆಯುವುದರೊಂದಿಗೆ ಶಿಷ್ಯರಿಗೆ ಪ್ರವಚನಗಳ ಮೂಲಕ ತಮ್ಮ ಜ್ಞಾನವನ್ನು ನೀಡುತ್ತಿದ್ದರು. ದೇಶ ಸಂಚಾರ ಮಾಡುತ್ತಾ ಎಲ್ಲ ಕಡೆ ಧರ್ಮ ಸಂಸ್ಥಾಪನೆ ಮಾಡುತ್ತ ಹಿಂದೂ ಧರ್ಮದ ವೇದಾಂತದ, ಅದ್ವೈತ ತತ್ತ್ವದ ಮಹತ್ತ್ವವನ್ನು ಪ್ರತಿಪಾದಿಸುತ್ತಿದ್ದರು. ಕಾಶ್ಮೀರದ ಸರ್ವಜ್ಞಪೀಠದಲ್ಲಿಯೂ ತಮ್ಮ ಅದ್ಭುತವಾದ ಜ್ಞಾನದಿಂದ ಎಲ್ಲ ಪಂಡಿತರ ಸಂದೇಹಗಳನ್ನು ಪರಿಹರಿಸಿ ಸರ್ವಜ್ಞಪೀಠಾರೋಹಣವನ್ನು ಮಾಡಿದರು. ಕೇವಲ ಮೂವತ್ತೆರಡೇ ವರ್ಷಗಳಲ್ಲಿ ಇಷ್ಟೆಲ್ಲ ಸಾಧನೆ ಮಾಡಿದ ಅವತಾರ ಪುರುಷ ಶ್ರೀಶಂಕರಾಚಾರ್ಯರು ತಮ್ಮ ನಾಲ್ವರು ಪ್ರಮುಖ ಶಿಷ್ಯರನ್ನು ಕರೆದು ವೇದಾಂತವನ್ನು, ಅದ್ವೈತ ತತ್ತ್ವವನ್ನು ಎಲ್ಲೆಡೆ ಪ್ರಚಾರಮಾಡಲು ಆದೇಶಿಸಿ ಕೇದಾರನಾಥದಲ್ಲಿನ ಆ ಬೃಹತ್ ಹಿಮಾಲಯವನ್ನೇ ತಮ್ಮ ಬೃಂದಾವನವನ್ನಾಗಿ ಮಾಡಿಕೊಂಡರು.

ಅಪಾರ ಕರುಣಾಸಿಂಧುಂ ಅಜ್ಞಾನಧ್ವಾಂತ ಭಾಸ್ಕರಂ
ನೌಮಿ ಶ್ರೀಶಂಕರಾಚಾರ್ಯಂ ಸರ್ವಲೋಕೈಕ ಸದ್ಗುರುಮ್॥

– ನಂ. ನಾಗಲಕ್ಷ್ಮಿ

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-05-2025 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ




ಶ್ರೀ ಲಕ್ಷ್ಮಣ್, ಸಹಸಂಘಟನಾ ಕಾರ್ಯದರ್ಶಿ, ಎ.ಬಿ.ಆರ್.ಎಸ್.ಎಂ, ಇವರು ಪುತ್ತೂರು ಮತ್ತು ಮಂಗಳೂರಿನ ಪಿಯು ಕಾಲೇಜಿನ ಉಪನ್ಯಾಸಕರ ಜೊತೆಯಲಿ ಶೈಕ್ಷಣಿಕ ವಿಚಾರಗಳ ಕುರಿತು ಸಂವಾದ.



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕದ ವತಿಯಿಂದ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಸಂಜು ಕುಮಾರ್ ಪಾಟೀಲ್, ವಿಭಾಗ ಪ್ರಮುಖ ಚಂದ್ರಶೇಖರ ಪಾಟೀಲ, ಸುರೇಶ ಅಕ್ಕಾ ಶಂಕರ ಲಿಂಗ್ ಕಲ ಶೆಟ್ಟಿ, ಚಂದ್ರಶೇಖರ್ ಗೋಸಲ್ ಮುಂತಾದವರು ಉಪಸಿತರಿದ್ದರು.



ಸಂಸ್ಕೃತ ವಿಷಯದ ಶಿಕ್ಷಕರ ಹುದ್ದೆಗಳ ಮಂಜೂರಾತಿಗಾಗಿ ಮನವಿ




ಶ್ರೀ ವೃಷಬೇಂದ್ರಸ್ವಾಮಿ, ಸಂಘಟನಾ ಕಾರ್ಯದರ್ಶಿ ಮತ್ತು ಶ್ರೀ ಆರ್. ಕೊಟ್ರಪ್ಪ, ಸಹ ಸಂಘಟನಾ ಕಾರ್ಯದರ್ಶಿ ಇವರೊಡನೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಯಾದಗಿರಿ ಜಿಲ್ಲೆಯ ಪ್ರಮುಖರ ಮತ್ತು ಬೀದರ್ ಜಿಲ್ಲೆಯ ಪ್ರಮುಖರ ಚರ್ಚೆ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com